ಹರಿದು ಬರತೊಡಗಿತು. ದಸರಾದಲ್ಲಿ ಆಯುಧಪೂಜೆ ಜೋರಾಗಿರುತ್ತಿತ್ತು. ಯಜಮಾನರ ಹೆಂಡತಿ ಮಗಳು ಭಾಗವಹಿಸುತ್ತಿದ್ದರು. ರೇಶಿಮೆ ಸೀರೆ, ಕೊರಳತುಂಬ ಚಿನ್ನ ಹಾಕಿಕೊಂಡ ದಪ್ಪ ಶರೀರದ ಯಜಮಾನಿ ಎಲ್ಲರನ್ನ ಅಕ್ಕರೆಯಿಂದ ಮಾತಾಡಿಸುತ್ತ ಕೈಯಾರ ಉಡುಗೊರೆ ಕೊಡುತ್ತಿದ್ದರು. ಮಗಳಿಗೆ ಹದಿನೆಂಟೊ ಹತ್ತೊಂಬತ್ತೊ ಇತ್ತೇನೊ, ನಿಂತಲ್ಲಿ ನಿಲ್ಲದ ಪಾದರಸದಂತವಳು. ಬೆಳ್ಳನೆ ಬಣ್ಣ, ಉರುಟಾದ ಮುಖ ಸದಾ ಏನನ್ನೊ ಹುಡುಕುವ ಚಂಚಲ ಕಣ್ಣು. ಅರಳುವ ಶರೀರ; ಘನಗೊಳ್ಳುತ್ತಿರುವ ಪ್ರಾಯ.

ವಿಶ್ವದುಗಮದ ಮಹಾಸ್ಫೋಟದ ವೇಗದಲ್ಲೆ ಶಹರ ಬೆಳೆಯುತ್ತಿರುವುದು ಅರಿವಿಗೆ ಬರುವ ಹೊತ್ತಿಗೆ ಇಲ್ಲೆಲ್ಲ ಸೈಟು ಬಡಾವಣೆಗಳಾಗಿ ಫ್ಯಾಕ್ಟರಿಯನ್ನು ಸುತ್ತುವರಿದು ದಿಗ್ಬಂಧನದಲ್ಲಿ ಹಿಡಿದಾಗಿತ್ತು. ಫ್ಯಾಕ್ಟರಿಗೆ ಅರ್ಧ ಕಿಲೋಮೀಟರು ದೂರದಲ್ಲಿ ಯಜಮಾನರು ಹೊಸ ಬಂಗಲೆ ಕಟ್ಟಿಸಿದಮೇಲೆ ಆಗಾಗ ಮಗಳು ಈಕಡೆ ಬರುವುದು ಜಾಸ್ತಿಯಾಗಿತ್ತು. ಆವತ್ತೊಂದು ದಿನ ತೆಳು ಕಾಯದ ಯುವಕನೊಬ್ಬ ಬಂದಿದ್ದ. ಚುಪುರುಗಡ್ಡ ಬಗಲಿಗೊಂದು ತೂಗುಚೀಲ. ಏನನ್ನೋ ಅರಸುವವನಂತೆ ಅಲೆದಾಡುತ್ತ ನಿತ್ಯವೆನ್ನುವಂತೆ ಬರುತ್ತಿದ್ದ. ಖಾಲಿಸೈಟು ಕಟ್ಟಡ ಕೆಲಸ ನಡೆಯುವಲ್ಲೆಲ್ಲ ಓಡಾಡುತ್ತ ಒಣಗಿದ ಕೋಲು ಕಟ್ಟಿಗೆ, ಗ್ರಾನೈಟ್‌ಚೂರು, ಒಡಕು ಹಂಚು ಏನು ಸಿಕ್ಕರೆ ಅದನ್ನು ಆಯ್ದುಕೊಳ್ಳುತ್ತ ಚಾಕು ಬಳಸಿ ಕಲಾತ್ಮಕ ಆಕೃತಿಗಳನ್ನು ರೂಪಿಸುತ್ತಿದ್ದ. ಕೆಲಸದವರು ಅಚ್ಚರಿ ಪಡುತ್ತಲೂ, ಮೆಚ್ಚುತ್ತಲೂ ಮಾತನಾಡುತ್ತಿದ್ದರು. ಆ ಯುವಕ ಯಜಮಾನರ ತಂಗಿಯ ಮಗ ಅಂತ ಹೇಳಿದರು. ಎಂ.ಎ. ಮಾಡಿಕೊಂಡಿದ್ದ, ಆದರೆ ಇಂತಹ ಕಲೆಯಲ್ಲಿ ಆಸಕ್ತ. ಪ್ರಭಾವ ಬೀರಿ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಕೊಡಿಸಲು ಯತ್ನಿಸಿದರು. ಆತ ಎಲ್ಲೂ ನಿಲ್ಲುತ್ತಿರಲಿಲ್ಲ. ಸುತ್ತಮುತ್ತ ಖಾಲಿ ಜಾಗೆಯಲ್ಲಿ ಅಮೂರ್ತ ಕಲಾಕೃತಿಗಳ ರಚನೆಗೆ ಕಚ್ಚಾವಸ್ತು ಸಿಗುತ್ತಿದ್ದುದಕ್ಕೆ ಆಕರ್ಷಿತನಾಗಿ ಸುತ್ತುವುದರಲ್ಲಿ ಕಾಲ ಕಳೆಯುತ್ತಿದ್ದ. ಒಂದು ದಿನ ಯಜಮಾನರ ಮಗಳು ಅವನೊಂದಿಗಿದ್ದುದು ಕಂಡಿತು. ಮತ್ತೆರಡು ದಿನ ನೋಡಿದವರು ಅವಳನ್ನು ಚೇಂಬರಿಗೆ ಕರೆದು ಮಾತಾಡಿ ಮನೆಗೆ ಕಳಿಸಿದರು. ಆದರೆ, ಇದು ನಿಲ್ಲಲಿಲ್ಲ. ಅವಳು ಅವನನ್ನು ಮೆಚ್ಚಿದ್ದಾಳೆ ಅಂತ ಕೆಲಸದವರು ಗುಸುಗುಸು ಮಾತಾಡುವುದು ಸುರುವಾಯ್ತು. ಚೇಂಬರಿನಲ್ಲಿ ಯಜಮಾನರು ಅವಳನ್ನು ಗದರಿಸುವುದು ಅವಳು ಅಳುತ್ತ ಹಟ ಮಾಡುವುದು ತನ್ನ ಕಿರುಗಣ್ಣಿಗು ಕಾಣಿಸಿತ್ತು. ಯಜಮಾನರು ಏನೋ ಚಿಂತೆಯಲ್ಲಿ ಕುಳಿತಿರುವಂತೆ ಕಾಣುತ್ತಿತ್ತು.

'ಹೊಲಕ್ಕೆ ಮಿಡತೆ ಹಿಂಡು ದಾಳಿಯಿಟ್ಟಂತೆ ಈಗ ಬಂದವರು ಇವರು. ಯಾವಾಗಿಂದೋ ನಾವಿದ್ದವರು' ಘನಶ್ಯಾಮನ ಆವೇಶಕ್ಕೆ ಪರಮಶಿವಯ್ಯನ ಮುಖದಲ್ಲಿ ಮೆಚ್ಚುಗೆ ಮೂಡಿತ್ತು. ಏನಾದರೂ ಮಾಡಲು ಸಾಧ್ಯವ ನೋಡು ಅಂತ ಅವನನ್ನೆ ಕಳಿಸಿದ್ದರು. 'ಇಂತಹ ಉತ್ಪನ್ನಗಳ ಫ್ಯಾಕ್ಟರಿಯಲ್ಲಿ ಹೊರಬೀಳುವ ತ್ಯಾಜ್ಯ ಅತ್ಯಲ್ಪ. ಲೈಸೆನ್ಸ್ ಪಡೆದಿರೋ ಫ್ಯಾಕ್ಟರಿ. ಅದಿರುವುದು ಗೊತ್ತಿದ್ದೂ ಮನೆ ಕಟ್ಟಿದೋರು ನೀವು. ಈಗ ಇದ್ದಕ್ಕಿದ್ದಂತೆ ಕೆರೆಗೆ ತ್ಯಾಜ್ಯ ಸೇರತಿದ್ದರೆ ವಾಸನೆ ಬರತಿದ್ದರೆ ಅದು ಈ ಹೊಸ ವಸತಿ ಸಮುಚ್ಚಯಗಳ ಮನೆಗಳ ಕಸ ಮತ್ತು ಗಲೀಜು ನೀರಿಂದ. ನಿಮ್ಮ ಡ್ರೇನೇಜು ಲೀಗಲ್ಲಾಗಿದ್ಯೇನ್ರೀ? ಕೇವಣಿ ಕಟ್ಟಿದೀರಾ? ನಾವು ಎಷ್ಟು ಟ್ಯಾಕ್ಸ್ ಕಟ್ಟತಿದೀವಿ ಗೊತ್ತಾ? ಅದನ್ನ ನೋಡದೆ ಫ್ಯಾಕ್ಟರೀನೆ ಸ್ಥಳಾಂತರಿಸಿ ಅಂದರೆ?' ಎಷ್ಟೆಷ್ಟೋ ಅಕ್ರಮಗಳ ನಡುವೆ ಮನೆ ಕಟ್ಟಿಕೊಂಡ ನಿವಾಸಿಗಳು, ಸಮುಚ್ಚಯಗಳ ಅಸೊಸಿಯೇಶನ್‌ಗಳು ಅವನ ವಾದದೆದುರು ಗೊಂದಲಗೊಂಡು ಸ್ವರ ತಗ್ಗಿಸಿದರು. ಅದೇ ಆವೇಶದಲ್ಲಿ ಅಧಿಕಾರಿಗಳ ಎದುರೂ ವಾದ ಮುಂದುವರಿಸಿದ್ದಕ್ಕೆ ಅವರೂ ಸದ್ಯಕ್ಕೆ ಬೇಡ ಅಂತ ಕಡತಗಳನ್ನು ಆಚೆ ಹಾಕಿಬಿಟ್ಟರು. ಇದಾಗಿ ವಾರವಾಗಿರಬಹುದು ತನ್ನನ್ನು ಮನೆಗೆ ಬರಹೇಳಿದ್ದರು. ಏನೋ ಕೆಲಸವಿರಬಹುದು ಅಂತ ತಾನು